# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 961 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 24.02.2022 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಬಾರ್, ರೆಸ್ಟೋರೆಂಟ್, ಸಿ.ಎಲ್–2, ಸಿ.ಎಲ್ –3 ಮತ್ತು ಇತರೆ ಲೈಸೆನ್ಸ್‌ಗಳನ್ನು ನೀಡಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | 1992ನೇ ಸಾಲಿನಿಂದ ಹೊಸದಾಗಿ ಸಿಎಲ್–2, ಸಿಎಲ್–9 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್–2 ಮತ್ತು ಸಿಎಲ್–9 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ.<br><br>ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–8, ಸಿಎಲ್–7ಎ, ಸಿಎಲ್–11ಸಿ, ಫಾರ್ಮ್ ಸಿಎಲ್–16, ಫಾರ್ಮ್ ಸಿಎಲ್ –17 ಮತ್ತು ಫಾರ್ಮ್ ಸಿಎಲ್–18 ಸನ್ನದುಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ–3(11–ಸಿ), 8, 8(ಎ) ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ–5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಸ್ಥಳೀಯ ಸಂಸ್ಥೆಗಳು, ಹಾಗೂ ಪತ್ರಾಂಕಿತ ಅಧಿಕಾರಿಗಳ ಕೇಂದ್ರ/ರಾಜ್ಯ ಸರ್ಕಾರಿ ಕಛೇರಿಗಳು ಇರುವಂತಿಲ್ಲ. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164–12166/2016ರ ದಿನಾಂಕ:31–03–2017ರಲ್ಲಿ |

| | | |
|---|---|---|
| | | ಆದೇಶಿಸಿದಂತೆ 20,000ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:10243/2017ರಲ್ಲಿನ ದಿನಾಂಕ: 11.07.2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸರ್ಕಾರದ ಪತ್ರ ಸಂಖ್ಯೆ:ಆಇ 36 ಇಡಬ್ಲ್ಯೂಪಿ 2018, ದಿನಾಂಕ:06.08.2020ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ |

| | | |
|---|---|---|
| | | ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.<br><br>ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಆಇ 33 ಇಎಫ್ಎಲ್ 2021, ದಿನಾಂಕ:19.01.2022ರಲ್ಲಿ ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಬಾರ್ ರೆಸ್ಟೋರೆಂಟ್, ಸಿಎಲ್-2, ಸಿ.ಎಲ್-3 ಮತ್ತು ಇತರೆ ಲೈಸೆನ್ಸ್‌ಗಳನ್ನು ಮಂಜೂರು ಮಾಡುವ ಸಮಯದಲ್ಲಿ ಅಧಿಕಾರಿಗಳು ಈ ಮಾನದಂಡಗಳನ್ನು ಉಲ್ಲಂಘನೆ ಮಾಡಿ ಲೈಸೆನ್ಸ್ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಕೈಗೊಳ್ಳಲಾದ ಶಿಸ್ತಿನ ಕ್ರಮವೇನು; (ಸಂಪೂರ್ಣ ಮಾಹಿತಿ ನೀಡುವುದು) | ಬಂದಿದೆ.<br><br>ಸನ್ನದುಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಮಾನದಂಡಗಳನ್ನು ಅನುಸರಿಸದೇ ಸನ್ನದು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವ ಒಟ್ಟು 07 ಪ್ರಕರಣಗಳಿವೆ. ಪ್ರಕರಣಗಳ ಮಾಹಿತಿ ಹಾಗೂ ನಿಯಮಗಳನ್ನು ಉಲ್ಲಂಘಿಸಿರುವ ಅಧಿಕಾರಿಗಳ ವಿರುದ್ಧ ಜರುಗಿಸಲಾಗಿರುವ ಕ್ರಮದ ವಿವರಗಳನ್ನುಅನುಬಂಧದಲ್ಲಿ ಇರಿಸಿದೆ. |
| ಇ) | ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಬಾರ್, ರೆಸ್ಟೋರೆಂಟ್, ಸಿಎಲ್-2, ಸಿಎಲ್-3, ಮತ್ತು ಇತರೆ ಲೈಸೆನ್ಸ್‌ಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಮಾನದಂಡಗಳಾದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಎಂ.ಡಿ.ಆರ್ ಹಾಗೂ ಶಾಲಾ/ಕಾಲೇಜುಗಳು, ಪ್ರಾರ್ಥನಾ ಮಂದಿರಗಳು, ಆಸ್ಪತ್ರೆಗಳಿಂದ ನಿಗದಿಪಡಿಸಿರುವ ಅಂತರದಿಂದ ದೂರವಿರಬೇಕೆಂದು ಸೂಚಿಸಲಾಗಿರುವ | |

| | | |
|---|---|---|
| | ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳೆಷ್ಟು ; | |
| ಈ) | ಇಂತಹ ಪ್ರಕರಣಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿರುವವರ ಮೇಲೆ ಯಾವ ರೀತಿ ಕ್ರಮ ಜರುಗಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | |

ಆಇ 26 ಇಎಲ್‌ಕ್ಯೂ 2022

(ಕೆ. ಗೋಪಾಲಯ್ಯ)

ಅಬಕಾರಿ ಸಚಿವರು

NOTE 7 (Attachment : ಅನುಬಂಧ.pdf)

# ಅನುಬಂಧ

| ಕ್ರ.ಸಂ | ಕಡತ ಸಂಖ್ಯೆ | ಅಧಿಕಾರಿ / ನೌಕರರ ಹೆಸರು ಪದನಾಮ ಶ್ರೀಯುತ/ಶ್ರೀಮತಿ | ವಿಷಯ | ಜರುಗಿಸಲಾದ ಕ್ರಮ |
|---|---|---|---|---|
| 01 | ಇಸಿಇ/ಬಿಎನ್‌ಜಿ/10/ ಡಿಎಸ್‌ಸಿ (1)/2009 | ಶ್ರೀ ಮಲ್ಲಿಕಾರ್ಜುನ ಗದ್ದಿ, ನಿವೃತ್ತ ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ(ಪಶ್ಚಿಮ) ಮತ್ತು ಇತರರು. | ಮೆ: ಹೋಟೆಲ್ ಬಸಂತ್ ರೆಸಿಡೆನ್ಸಿ, ಸಿಎಲ್-7 ಸನ್ನದನ್ನು ನಿಯಮ ಬಾಹಿರವಾಗಿ ಸನ್ನದು ಮಂಜೂರಾತಿ ಹಾಗೂ ನವೀಕರಣ ಮಾಡಿರುವ ಬಗ್ಗೆ. | ಸರ್ಕಾರದ ನಡವಳಿ ಆದೇಶ ಸಂಖ್ಯೆ: ಆಇ 100 ಇಪಿಎಸ್2017, ಬೆಂಗಳೂರು ದಿನಾಂಕ: 10.09.2020 ರಲ್ಲಿ ಗಾಂಧಿನಗರ, ಬೆಂಗಳೂರು ಇಲ್ಲಿನ ಬಸಂತ್ ರೆಸಿಡೆನ್ಸಿ ಹೊಟೆಲ್ ಗೆ ಸಿಎಲ್-7 ಸನ್ನದು ನವೀಕರಣ ಪ್ರಕರಣದಲ್ಲಿ ಶ್ರೀ ಎಂ.ಎಸ್. ತಾಂಬೋಳಿ ಮತ್ತು ಶ್ರೀ ಮಲ್ಲಿಕಾರ್ಜುನ ಗದ್ದಿ, ಅಂದಿನ ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ ಹಾಗೂ ಶ್ರೀ ವೆಂಕಟರಮಣಯ್ಯ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಇವರ ಮೇಲಿನ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ ಸರ್ಕಾರವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (1) (a) ರಡಿ ಶ್ರೀ.ಎಂ.ಎಸ್.ತಾಂಬೋಳಿ, ಶ್ರೀ. ಮಲ್ಲಿಕಾರ್ಜುನ ಗದ್ದಿ ಹಾಗೂ ಶ್ರೀ.ವೆಂಕಟರಮಣಯ್ಯ ಇವರ ಪಿಂಚಣಿಯಲ್ಲಿ ಶೇ 20 ರಷ್ಟನ್ನು 03 ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತದೆ. |
| 02 | ಇಸಿಇ/ಬಿಎನ್‌ಜಿ/19/ ಡಿಎಸ್‌ಸಿ (1)/2014 | 1. ಶ್ರೀ ಜಗದೀಶ್ ನಾಯಕ್, ಅಂದಿನ ಅಬಕಾರಿ ಉಪ ಆಯುಕ್ತರು | ಶ್ರೀ.ವೈ, ವೆಂಕಟೇಶ್, ಇವರಿಗೆ ನಂ: 256/ಎ/1, ಬೊಮ್ಮಸಂದ್ರ | ಸದರಿ ಪ್ರಕರಣದಲ್ಲಿ ಸರ್ಕಾರವು ದಿನಾಂಕ:08.08.2018 ರ ಆದೇಶದಲ್ಲಿ ಅಬಕಾರಿ ಆಯುಕ್ತರನ್ನು ಶಿಸ್ತು ಪ್ರಾಧಿಕಾರಿಗಳನ್ನಾಗಿ |

| | | | | |
|---|---|---|---|---|
| | | 2. ಶ್ರೀ ಯೋಗಾನಂದ್, ಅಬಕಾರಿ ಉಪ ಅಧೀಕ್ಷಕರು,<br>3. ಶ್ರೀ ವೈ ಭರತೇಶ್, ಅಬಕಾರಿ ಅಧೀಕ್ಷಕರು<br>4. ಶ್ರೀ ಸುರೇಶ, ಅಬಕಾರಿ ಉಪ ಅಧೀಕ್ಷಕರು<br>5. ಶ್ರೀ ಗೋಪಾಲ ಕೃಷ್ಣಗೌಡ, ಅಬಕಾರಿ ಉಪ ಆಯುಕ್ತರು ಮತ್ತು ಇತರೆ ಗ್ರೂಪ್–ಸಿ ವೃಂದದ ನೌಕರರುಗಳು ವಿರುದ್ಧ ಜಂಟಿ ಪ್ರಕರಣ<br>6. ಶ್ರೀ ಕಮಲಾಕರ್ ಬಿ ಹೆಗ್ಡೇಕರ್ | ಕೈಗಾರಿಕಾ ಪ್ರದೇಶ, ಹೊಸರು, ಮುಖ್ಯರಸ್ತೆ, ಆನೇಕಲ್ ತಾಲ್ಲೂಕು ಬೆಂಗಳೂರು ಇಲ್ಲಿಗೆ ನಿಯಮ ಬಾಹಿರವಾಗಿ 2002–03 ನೇ ಸಾಲಿಗೆ ಸಿಎಲ್–7 ಸನ್ನದನ್ನು ಮಂಜೂರು ಮಾಡಲು ಹಾಗೂ 2013–14ನೇ ಸಾಲಿನವರೆಗೆ ನವೀಕರಿಸಲು ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರ ವಿರುದ್ದ ಶಿಸ್ತು ಕ್ರಮ ಜರುಗಿಸುವ ಕುರಿತು. | ನೇಮಿಸಿದ್ದು, ಅದರಂತೆ ಈ ಕಛೇರಿಯಿಂದ ದಿನಾಂಕ:11.09.2018 ರಂದು ಅನುಬಂಧ–01 ರಿಂದ 04 ರವರೆಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಗಿರುತ್ತದೆ. ಕೆಎಟಿ ತಡೆಯಾಜ್ಞೆ ಇರುತ್ತದೆ<br>ಶ್ರೀ ವೈ.ವೆಂಕಟೇಶ್, ಮೆ:ವಿಷ್ಣು ಪ್ರಿಯ ಹೋಟೆಲ್, ನಂ.256 ಎ1, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ ಇವರ ವಿರುದ್ಧ ದೂರಿನ ಕುರಿತು–<br>ಸರ್ಕಾರದ ಆದೇಶ ಸಂಖ್ಯೆ:ಆಇ 86 ಇಪಿಎಸ್ 2014, ದಿನಾಂಕ:27.09.2014 ರಲ್ಲಿ ಶ್ರೀ ಕಮಲಾಕರ್ ಬಿ ಹೆಗಡೆಕರ್, ಅಬಕಾರಿ ನಿರೀಕ್ಷಕರು ಇವರ ವಿರುದ್ಧದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆ ನಡೆಸಲು ಪ್ರಕರಣವನ್ನು ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಲಾಗಿರುತ್ತದೆ.<br>ಪ್ರಕರಣದ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ವಿಚಾರಣಾ ವರದಿಯಲ್ಲಿನ ಶಿಫಾರಸ್ಸಿನಂತೆ ದಿನಾಂಕ:05.03.2021 ರಂದು ದಂಡನೆಯನ್ನು ವಿಧಿಸಿ ಆದೇಶಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ:ಆಇ 104 ಇಪಿಎಸ್ 2016, ದಿನಾಂಕ:07.09.2017 ರಲ್ಲಿ ಶ್ರೀ ಕಮಲಾಕರ್ ಬಿ. ಹೆಗಡೆಕರ್, ಅಬಕಾರಿ ನಿರೀಕ್ಷಕರು ಇವರ ವಿರುದ್ಧದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆ ನಡೆಸಲು ಪ್ರಕರಣವನ್ನು ಲೋಕಾಯುಕ್ತ–1 ರವರಿಗೆ ವಹಿಸಿ ಆದೇಶಿಸಲಾಗಿರುತ್ತದೆ.<br>ಪ್ರಕರಣದ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಒಂದೇ ಪ್ರಕರಣಕ್ಕೆ ಎರಡು ಬಾರಿ ವಿಚಾರಣೆಯನ್ನು ನಡೆಸಿರುವ ಹಿನ್ನೆಲೆಯಲ್ಲಿ ಈಗಾಗಲೇ ಒಂದು |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 11/04/2022 03:14 PM

| | | | | |
|---|---|---|---|---|
| | | | | ಪ್ರಕರಣದಲ್ಲಿ ದಂಡನೆಯನ್ನು ವಿಧಿಸಿರುವುದರಿಂದ, ಸದರಿ ಪ್ರಕರಣದಲ್ಲಿ ವಿಚಾರಣಾ ವರದಿ ಮತ್ತು ಲೋಕಾಯುಕ್ತರ ಶಿಫಾರಸ್ಸನ್ನು ತಿರಸ್ಕರಿಸಿ ದಿನಾಂಕ:21.10.2021ರ ಆದೇಶದಲ್ಲಿ ಶ್ರೀ ಕಮಲಾಕರ್ ಬಿ ಹೆಗಡೆಕರ್ ಇವರನ್ನು ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಲಾಗಿದೆ. |
| 03 | ಇಸಿಇ/06/ಹೊಸಪೇ/ ಡಿಎಸ್‌ಸಿ(2)/ /2015 | 1. ಶ್ರೀ ಎಲ್.ಎ.ಅದ್ವಾನಿ, ಅಬಕಾರಿ ಉಪ ಆಯುಕ್ತರು (ನಿವೃತ್ತರು) ಗದಗ ಜಿಲ್ಲೆ<br>2.ಶ್ರೀ ವಿವೇಕಾನಂದ ಮಂಕಾಳೆ, ಅಬಕಾರಿ ಉಪ ನಿರೀಕ್ಷಕರು ಮುಂಡರಗಿ ವಲಯ | ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 3(7) ರಲ್ಲಿನ ಅಗತ್ಯಗಳನ್ನು ಪೂರೈಸದೇ ಇದ್ದರೂ ಸಹಾ ಅಶೋಕ ಲಾಡ್ಜ್ ನ 2013-14 ಮತ್ತು 2014-15ನೇ ಸಾಲಿನ ಸಿ.ಎಲ್-7 ಸನ್ನದು ಮಂಜೂರು ಮಾಡಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವ ಕುರಿತು ಕರ್ನಾಟಕ ಲೋಕಾಯುಕ್ತ, ಗದಗ, ದೂರು ವಿಚಾರಣೆ. | ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/86/ಇಪಿಎಸ್/2015, ದಿನಾಂಕ: 29.08.2015ರ ಅನ್ವಯ ಶ್ರೀ ಎಲ್. ಎ ಅದ್ವಾನಿ, ಅಂದಿನ ಅಬಕಾರಿ ಉಪ ಆಯುಕ್ತರು, ಗದಗ ಜಿಲ್ಲೆ (ನಿವೃತ್ತಿ) ಮತ್ತು ಶ್ರೀ ವಿವೇಕಾನಂದ ಮಂಕಾಳೆ, ಅಂದಿನ ಅಬಕಾರಿ ಉಪ ನಿರೀಕ್ಷಕರು, ಮುನಿರೆಡ್ಡಿ ವಲಯ, ಗದಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಮೇರೆಗೆ ಸದರಿಯವರ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ ನಡೆಸಲು ನಿಯಮ 14ಎ ರನ್ವಯ ಪ್ರಕರಣವನ್ನು ಉಪ ಲೋಕಾಯುಕ್ತರು-1 ಇವರಿಗೆ ವಹಿಸಿ ಆದೇಶಿಸಲಾಗಿದೆ.<br>ಲೋಕಾಯುಕ್ತರವರಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು, ಶ್ರೀ ಎಲ್.ಎ.ಅದ್ವಾನಿ ಇವರು ನಿವೃತ್ತಿ ಹೊಂದಿರುವುದರಿಂದ ಇವರಿಗೆ ಲೋಕಾಯುಕ್ತರವರು ಶಿಫಾರಸ್ಸು ಮಾಡಿರುವ ದಂಡನೆಯನ್ನು ಮರುಪರಿಶೀಲಿಸುವಂತೆ ಕೋರಲಾಗಿರುತ್ತದೆ.<br>ಶ್ರೀ ವಿವೇಕಾನಂದ ಮಂಕಾಳೆ, ಇವರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣಾ ವರದಿ ಮತ್ತು ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನ ಆಧಾರದ ಮೇಲೆ ಸದರಿಯವರಿಗೆ ದಿನಾಂಕ: 26.07.2021ರಂದು ಎರಡನೇ ಕಾರಣ ಕೇಳುವ ನೋಟೀಸನ್ನು |

| | | | | |
|---|---|---|---|---|
| | | | | ಜಾರಿಗೊಳಿಸಲಾಗಿದ್ದು, ಇವರು ಸಲ್ಲಿಸಿರುವ ಸಮಜಾಯಿಷಿಯು ಪರಿಶೀಲನಾ ಹಂತದಲ್ಲಿರುತ್ತದೆ. |
| 04 | ಇಸಿಇ/02/ಎಂವೈಎಸ್/ ಡಿಎಸ್‌ಸಿ(2)/ 2016 | ಶ್ರೀ ಗಂಗಾಧರ್ ಹೆಚ್. ಮುದ್ದೆಣ್ಣವರ್, ಅಬಕಾರಿ ಉಪ ಅಧೀಕ್ಷಕರು, ಹುಣಸೂರು ಉಪ ವಿಭಾಗ, ಮೈಸೂರು ಜಿಲ್ಲೆ | ಇವರು ಡಿ.ಬಿ. ಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಬಾವಲಿ ಗ್ರಾಮದಲ್ಲಿ ಇರುವ ಅಕ್ರಮ ರೆಸಾರ್ಟ್ಸ್ ಹಾಗೂ ಬಾರ್‌ನ್ನು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತು) ನಿಯಮಗಳು 1967 ರ ನಿಯಮ 5(1) ರಡಿಯಲ್ಲಿ ಆಕ್ಷೇಪಣಾ ಸ್ಥಳದಲ್ಲಿದ್ದರೂ ಸಿ.ಎಲ್-7 ಸನ್ನದು ಮಂಜೂರು ಮಾಡಲು ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದು. | ಆದೇಶ ಸಂಖ್ಯೆ: ಇಸಿಇ/02/ಎಂವೈಎಸ್/ಡಿಎಸ್‌ಸಿ(2)/ 2016, ದಿನಾಂಕ: 21.08.2019ರ ಆದೇಶದನ್ವಯ ಆಪಾದಿತರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಆದೇಶಿಸಲಾಗಿರುತ್ತದೆ. ನಂತರ ಪ್ರಕರಣದ ವಿಚಾರಣಾದಿಕಾರಿಗಳು ದಿನಾಂಕ: 02.11.2019ರ ಪತ್ರದನ್ವಯ ವೈಯಕ್ತಿಕ ಕಾರಣ ದಿಂದ ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದರಿಂದ, ದಿನಾಂಕ: 07.03.2020ರ ತಿದ್ದುಪಡಿ ಆದೇಶದನ್ವಯ ಶ್ರೀ ಬಸವರಾಜ ಎಸ್. ತಡಹಾಳ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣೆ ನಡೆಸಲು ಆದೇಶವಾಗಿರುತ್ತದೆ. ಪ್ರಸ್ತುತ ಇಲಾಖಾ ವಿಚಾರಣೆ ಚಾಲ್ತಿಯಲ್ಲಿರುತ್ತದೆ. |
| 05 | ಇಸಿಇ/02/ಎಂವೈಎಸ್/ಡಿಎಸ್‌ಸಿ(2)/ 2015 | 1) ಶ್ರೀ ಗಂಗಾಧರ್ ಹೆಚ್. ಮುದಣ್ಣನವರ್, ಅಬಕಾರಿ ಉಪ ಅಧೀಕ್ಷಕರು, ಹುಣಸೂರು ಉಪ ವಿಭಾಗ, ಮೈಸೂರು ಜಿಲ್ಲೆ<br>2) ದಿವಂಗತ: ಆರ್. ಉಮಾಶಂಕರ್, ಅಂದಿನ ಅಬಕಾರಿ ನಿರೀಕ್ಷಕರು | ಶ್ರೀ ರಾಘವೇಂದ್ರ ರೆಸಿಡೆನ್ಸಿ, ಹುಣಸೂರು ತಾಲ್ಲೂಕು, ಇವರಿಗೆ ಸದರಿ ಸನ್ನದು ಆಕ್ಷೇಪಣಾ ಸ್ಥಳದಲ್ಲಿದ್ದರೂ ಸಿ.ಎಲ್-7 ಸನ್ನದು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವ ಬಗ್ಗೆ | ಸರ್ಕಾರದ ಆದೇಶ ಸಂಖ್ಯೆ: ಆಇ/01/ಇಪಿಎಸ್/2019, ದಿನಾಂಕ: 21.08.2019 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(iii) ರನ್ವಯ ಸದರಿಯವರುಗಳ 05 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆ ಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಲಾಗಿದೆ. |
| 06 | ಇಸಿಇ/02/ ಹೊಸಪೆ/ ಡಿಎಸ್‌ಸಿ(2)/2014 | 1. ಶ್ರೀ ಎಲ್.ಎ ಅದ್ವಾನಿ, ಅಬಕಾರಿ ಉಪ ಆಯುಕ್ತರು (ಪ್ರಭಾರ) (ನಿವೃತ್ತರು) | ಗದಗ ಜಿಲ್ಲೆಯ ಸಿ.ಎಲ್-4 ಹಾಗೂ ಸಿ.ಎಲ್-7 ಸನ್ನದುಗಳ ಷರತ್ತುಗಳು ಹಾಗೂ ನಿಬಂಧನೆಗಳನ್ನು | ಸರ್ಕಾರದ ಆದೇಶ ಸಂಖ್ಯೆ: ಆಇ/106/ಇಪಿಎಸ್/2017, ದಿನಾಂಕ: 03.12.2019ರ ಆದೇಶದನ್ವಯ ನಿವೃತ್ತ ಅಧಿಕಾರಿ/ನೌಕರರುಗಳ ವಿರುದ್ದದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ |



Generated from eOffice by GOPALAIAH K. FD-EXCISE MIN(GK), EXCISE MINISTER, FINANCE DEPT.SEC on 11/04/2022 03:14 PM

| | | | | |
|---|---|---|---|---|
| | | 2. ಶ್ರೀ ಎನ್ ರಾಮಚಂದ್ರಯ್ಯ, ಅಬಕಾರಿ ಉಪ ಆಯುಕ್ತರು, ಗದಗ (ನಿವೃತ್ತರು)<br>3. ಶ್ರೀ ಚಿದಾನಂದ ಎನ್ ಜನಾಯಿ, ಹಿಂದಿನ ಅಬಕಾರಿ ನಿರೀಕ್ಷಕರು, ಹಾಲಿ ಅಬಕಾರಿ ಉಪ ಅಧೀಕ್ಷಕರು<br>4. ಶ್ರೀ ಅಬ್ದುಲ್ ರಹಮನ್, ಅ.ಉ.ನಿ, ಶಿರಹಟ್ಟಿ ವಲಯ (ನಿವೃತ್ತರು)<br>5. ಶ್ರೀ ಎನ್.ಬಿ ಸಂಗನಾಳ, ಅ.ಉ.ನಿ ಗದಗ ವಲಯ(ನಿವೃತ್ತರು) | ಪೂರೈಸದಿದ್ದರೂ ಸನ್ನದು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿರುವ ಸಂಬಂಧ ಲೋಕಾಯುಕ್ತರಿಗೆ ದೂರು ಸಲ್ಲಿಸಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮ. | ಆದೇಶವಾಗಿದೆ. ವಿಚಾರಣಾ ವರದಿ ಸ್ವೀಕೃತವಾಗಿದ್ದು, ವಿಚಾರಣಾ ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ.<br><br>ನಿವೃತ್ತ ಅಧಿಕಾರಿಗಳನ್ನು ಹೊರತುಪಡಿಸಿದಂತೆ, ಕಾರ್ಯನಿರ್ವಾಹಕ ಅಧಿಕಾರಿ/ನೌಕರರುಳಾದ :<br><br>1. ಶ್ರೀ ಮಲ್ಲಿಕಾರ್ಜುನ ರೆಡ್ಡಿ,<br>2. ಶ್ರೀಮತಿ ಆಶಾಲತಾ,<br>3. ಶ್ರೀ ರವಿನಾಗರಾಳ<br>4. ಶ್ರೀ ವಿವೇಕಾನಂದ ಮಂಕಾಳೆ,<br>5. ಶ್ರೀ ಚಿದಾನಂದ ಎನ್ ಜನಾಯಿ,<br>ಇವರುಗಳ ವಿರುದ್ಧ ಇಲಾಖಾ ವಿಚಾರಣೆಗೆ ಅಬಕಾರಿ ಆಯುಕ್ತರು ಆದೇಶಿಸಿದ್ದು, ದಿನಾಂಕ: 05.06.2021ರ ಆದೇಶದಲ್ಲಿ ಸದರಿ ಅಧಿಕಾರಿ/ನೌಕರರುಗಳಿಗೆ ಎಚ್ಚರಿಕೆ ನೀಡಿ ಶಿಸ್ತು ಕ್ರಮದ ನಡವಳಿಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. |
| 07 | ಇಸಿಇ/07/ಡಿಎಸ್‌ಸಿ(2)/ಮೈಸೂರು ವಿಭಾಗ/2019 | 1. ಶ್ರೀಮತಿ ಎಂ ರೂಪ, ಅಂದಿನ ಅಬಕಾರಿ ಉಪ ಆಯುಕ್ತರು, ಮೈಸೂರು ಜಿಲ್ಲೆ,<br>2. ಶ್ರೀಮತಿ ಸ್ಮಿತಾ ರಾವ್, ಅಂದಿನ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಚೇರಿ, ಮೈಸೂರು ಜಿಲ್ಲೆ.<br>3. ಶ್ರೀ ಎಂ ಮಹದೇವು, ಅಂದಿನ | ಮ್ಯಾನೇಜಿಂಗ್ ಡೈರೆಕ್ಟ್ರ ದಿ ಏಟರೀಯಂ ಬೋಟಿಕ್ ಹೋಟೆಲ್ ಮೈಸೂರು ಇವರಿಗೆ 2018-19 ನೇ ಸಾಲಿಗೆ ನಿಯಮ ಬಾಹಿರವಾಗಿ ಸಿಎಲ್-7 ಸನ್ನದು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವ ಅಧಿಕಾರಿಗಳು. ಸನ್ನದಿನ ಕಟ್ಟಡವು ಮುಖ್ಯದ್ವಾರದಿಂದ 43 ಮೀಟರ್ | ನೋಟೀಸ್ ಸಂಖ್ಯೆ:ಇಸಿಇ/07/ಡಿಎಸ್‌ಸಿ(2)/ಮೈಸೂರು ವಿಭಾಗ/ 2019. ದಿನಾಂಕ:12.10.2020 ರನ್ವಯ ಆಪಾದಿತ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದ್ದು, ಆಪಾದಿತ ಅಧಿಕಾರಿಗಳು ಸಮಜಾಯಿಷಿಯನ್ನು ಸಲ್ಲಿಸಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.<br>ಸದರಿ ಸಿಎಲ್-7 ಸನ್ನದನ್ನು ಮಂಜೂರು ಮಾಡಲಾಗಿರುವುದಿಲ್ಲ. |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 11/04/2022 03:14 PM

| | | | | |
|---|---|---|---|---|
| | | ಅಬಕಾರಿ ಉಪ ಅದೀಕ್ಷಕರು, ಮೈಸೂರು ಉಪ ವಿಭಾಗ.<br>4. ಶ್ರೀ ಶಿವಾನಂದ ಹಂದ್ರಾಳ, ಅಂದಿನ ಅಬಕಾರಿ ನಿರೀಕ್ಷಕರು, ಮೈಸೂರು ವಲಯ–1 | ಅಂತರದಲ್ಲಿ ರಾಷ್ಟ್ರೀಯ ಹೆದ್ದಾರಿ 275 ಹಾದು ಹೋಗಿದ್ದು ಹಾಗೂ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 21,109 ಜನ ಸಂಖ್ಯೆ ಹೊಂದಿರುವುದಾಗಿ ತಪ್ಪು ವರದಿಯನ್ನು ಸಲ್ಲಿಸಿ ಸನ್ನದು ಮಂಜೂರಾತಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದು. | |

**ಆಇ 26 ಇಎಲ್‌ಕ್ಯೂ 2022**



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 11/04/2022 03:14 PM